**O.S. 88-2024** **PW – 1**

**ಪ್ರಮಾಣೀಕರಿಸಲಾದ ದಿನಾಂಕಃ 30.06.2026.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಬಿ. ಬಿ. ಎಂ. ವಕೀಲರಿಂದಃ**

ನನ್ನ ಮನೆ ಕೈಕೇರಿಯಲ್ಲಿದೆ. ದಾವಾಸ್ತಿ ಮನೆಯಿಂದ 200 ಮೀ ದೂರದಲ್ಲಿದೆ. ನನ್ನ ಮನೆಯಿಂದ ಪಟ್ಟಣಕ್ಕೆ ದಾವಾಸ್ತಿ ಮೂಲಕ ಹೋಗಬೇಕು ಎಂದರೆ ಸರಿಯಲ್ಲ. 1981 ರಲ್ಲಿ ನನ್ನ ತಂದೆ ದಾವಾಸ್ತಿಯನ್ನು ಖರೀದಿಸಿದರು. ಬಿ ಶೆಡ್ಯೂಲ್ ದಾವಾಸ್ತಿಯನ್ನು ಪ್ರತಿವಾದಿಗಳ ತಂದೆ ಯಾವಾಗ ಖರೀದಿಸಿದರು ನನಗೆ ಗೊತ್ತಿಲ್ಲ. ಪ್ರತಿವಾದಿಗಳ ಆಸ್ತಿ ಬೇರೆ ಸರ್ವೆ ನಂಬರ್ ದ್ದಾಗಿರುತ್ತದೆ, ನಾನು ಅವರ title document ಅನ್ನು ನೋಡಿಲ್ಲ. ನನ್ನ ತಂದೆಯ ಮತ್ತು ಪ್ರತಿವಾದಿಗಳ ತಂದೆಯ ವೆಂಡರ್ ಒಬ್ಬರೇ ಎಂದರೆ ಸರಿಯಲ್ಲ. ನನ್ನ ತಂದೆ ಕೊಂಗಂಡ ಸರಸ್ವತಿ ಪೊನ್ನಪ್ಪರವರಿಂದ ಖರೀದಿಸಿರುತ್ತಾರೆ, ಪ್ರತಿವಾದಿಗಳು ಕುಪ್ಪಣ್ಣ ಕುಟುಂಬಸ್ಥರಿಂದ ಖರೀದಿಸಿರುತ್ತಾರೆ. ಪ್ರತಿವಾದಿಗಳ ತಂದೆ ಕೊಂಗಂಡ ಪೊನ್ನಪ್ಪ ಮತ್ತು ಕೊಂಗಂಡ ಸರಸ್ವತಿ ಪೊನ್ನಪ್ಪರವರು cousins ಎಂದರೆ ಸರಿಯಲ್ಲ.

ನನ್ನ ತಂದೆ ದಾವಾ ಎ ಶೆಡ್ಯೂಲ್ ಆಸ್ತಿಯನ್ನು ನನ್ನ ಅಣ್ಣನ ಹೆಸರಿನಲ್ಲಿ ಖರೀದಿಸಿರುತ್ತಾರೆ. ಈ ಆಸ್ತಿಯು ನನಗೆ ವಿಭಾಗದ ಮೂಲಕ ಬಂದಿರುತ್ತದೆ. ವಿಭಾಗ ಆದಾಗ ಮತ್ತು ನಂತರವು ಎ ಶೆಡ್ಯೂಲ್ ಆಸ್ತಿಯ ಸರ್ವೆ ನಂ. ಒಂದೇ ಇತ್ತು. ವಿಭಾಗವಾದಾಗ ಎ ಶೆಡ್ಯೂಲ್ ಆಸ್ತಿಯ ಸರ್ವೆ ಮಾಡಿಸಿಲ್ಲ. ಮೊದಲಿನಿಂದಲೂ ಎ ಶೆಡ್ಯೂಲ್ ಆಸ್ತಿಯು ನನ್ನ ಅಣ್ಣ ಸ್ವಾದೀನಲ್ಲಿದ್ದು ವಿಭಾಗವಾದ ನಂತರ ನಾನು ಸ್ವಾದೀನದಲ್ಲಿದ್ದೇನೆ. ನಾನು ದಾವಾ ಎ ಶೆಡ್ಯೂಲ್ ಸರ್ವೆ ನಂ. ಆಸ್ತಿಯಲ್ಲಿ ಮಾರಾಟ ಮಾಡಿಲ್ಲ, ನನ್ನ ಅಣ್ಣ ಮತ್ತು ತಂದೆ 1982 ಅಥವಾ1983 ರಲ್ಲಿ ಸ್ವಲ್ಪ ಭಾಗದ ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆ. 1982 ಮತ್ತು 1983 ರಲ್ಲಿ ಮಾರಾಟ ಮಾಡುವಾಗ ಆಸ್ತಿಗಳ ಸರ್ವೆ ಆಗಿದೆ. ಕೊಂಗಂಡ ಸರಸ್ವತಿ ಪೊನ್ನಪ್ಪರವರ ಜೊತೆ 1982 ರಲ್ಲಿ ಆಸ್ತಿಗಳ ಯಾವುದೇ ವ್ಯಾಜ್ಯ ಇರಲಿಲ್ಲ. ಸರ್ವೆ ನಂ. 87/51 ರಲ್ಲಿ 1982 ರಲ್ಲಿ ಕೊಂಗಂಡ ಸರಸ್ವತಿ ಪೊನ್ನಪ್ಪರವರ ಹೆಸರಿನಲ್ಲಿ RTC ಇತ್ತು. 1982 ರಿಂದ 2001 ರ ತನಕ ಸರ್ವೆ ನಂ. 87/51 ರಲ್ಲಿ ಯಾವುದೇ ಇಸಾ Phod ಗಳು ಆಗಲಿಲ್ಲ. 11 ವರ್ಷಗಳ ಹಿಂದೆ ಸರ್ವೆ ನಂ. 87/51 ಆಸ್ತಿಯು ಹೊಸದಾಗಿ ಸರ್ವೆ ನಂ. 87/110 ಎಂದು ರೀ ನಂಬರ್

ಆಯಿತು. ನನ್ನ ಅಣ್ಣನ ಹೆಸರಿನಲ್ಲಿ ದಾವಾ ಸರ್ವೆ ನಂ. ಖರೀದಿಸುವಾಗ ಅದರ ಪಕ್ಕದಲ್ಲಿರುವ ಸರ್ವೆ ನಂ. 87/49 ಪ್ರತಿವಾದಿಗಳ ಕುಟುಂಬ ಹೆಸರಿನಲ್ಲಿ ಇತ್ತು ಇಲ್ಲವೋ ಗೊತ್ತಿಲ್ಲ. ಈಗ ಪ್ರತಿವಾದಿಗಳು ಸರ್ವೆ ನಂ. 87/49 ರಲ್ಲಿ ವಾಸವಿದ್ದಾರೆ. ಈಗಿರುವ ಪ್ರತಿವಾದಿಗಳ ಮನೆ ನನ್ನ ತಂದೆ ಅಣ್ಣನ ಹೆಸನರಿಲ್ಲಿ ಖರೀದಿಸುವಾಗಲೇ ಇತ್ತು ಎಂದರೆ ಸರಿ, ಆಗ ಮನೆ ಚಿಕ್ಕದಾಗಿತ್ತು. ಆಗ ಪ್ರತಿವಾದಿಗಳ court yard, Kennel, tiled shed ಇರಲಿಲ್ಲ, ಇತ್ತೀಚೆಗೆ ಕಟ್ಟಿಕೊಂಡಿದ್ದಾರೆ.

ಸರ್ವೆ ನಂ. 87/110 ಮತ್ತು ಸರ್ವೆ ನಂ. 87/49 ರ ನಡುವೆ fence ಇದೆ ಎಂದರೆ ಮೊದಲು ಇತ್ತು, ಈಗ ಇಲ್ಲ, ಪ್ರತಿವಾದಿ ಅದನ್ನು ತೆಗೆದಿರುತ್ತಾನೆ. ಒತ್ತುವರಿಯಾದ ಜಾಗಲ್ಲಿ Kennel ಮತ್ತು tiled shed ಇದೆ ಎಂದು ಹೇಳುತ್ತಿದ್ದೇನೆ ಎಂದರೆ ಸರಿ. ಪ್ರತಿವಾದಿಗಳೇ Kennel ಮತ್ತು tiled shed ಅನ್ನು ಕಟ್ಟಿರುತ್ತಾರೆ. ಪ್ರತಿವಾದಿಯ ತಂದೆ 1975 ರಲ್ಲಿ Kennel ಮತ್ತು tiled shed ಅನ್ನು ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಒತ್ತುವರಿಯಾಗಿದೆ ಎಂದು ಹೇಳುವ ಜಾಗ 1.75 ಸೆಂಟ್ಸ್ ಅಲ್ಲ, 3 ಸೆಂಟ್ಸ್ ಆಗಿರುತ್ತದೆ, ನನ್ನ ತಂದೆ ಖರೀದಿಸಿದ ಕಾಲದಲ್ಲಿ ಅದರ ಸ್ವಾಧೀನವೇ ಪಡೆಯಲಿಲ್ಲ ಎಂದರೆ ಸರಿಯಲ್ಲ. 1970 ರಲ್ಲಿ ನನ್ನ ಅಣ್ಣನ ವೆಂಡರ್ ಈ 3 ಸೆಂಟ್ಸ್ ಅನ್ನು ಪ್ರತಿವಾದಿಗಳ ಸ್ವಾಧೀನಕ್ಕೆ ಬಿಟ್ಟದ್ದರು ಎಂದರೆ ಸರಿಯಲ್ಲ. Fragmentaiton ಕಾಯ್ದೆ ಇದ್ದ ಕಾರಣಕ್ಕೆ ಈ 3 ಸೆಂಟ್ಸ್ ಗೆ ಪ್ರತಿವಾದಿಯ ಕುಟುಂಬ ಪತ್ರ ಮಾಡಿಕೊಳ್ಳಲಾಗಲಿಲ್ಲ ಎಂದರೆ ಸರಿಯಲ್ಲ. ಮೊದಲಿನಿಂದಲೂ ಪ್ರತಿವಾದಿ ಈ 3 ಸೆಂಟ್ಸ್ ಜಾಗದಲ್ಲಿ ಸ್ವಾಧೀನ ಇರುವುದು ಗೊತ್ತಿದ್ದು, ಅಷ್ಟು ಜಾಗ ಬಿಟ್ಟು ಉಳಿದ ಸ್ವಾಧೀನ ನನ್ನ ತಂದೆಯ ಕಾಲದಿಂದಲೂ ನಾವು ಪಡೆದಿದ್ದೇವೆ ಎಂದರೆ ಸರಿಯಲ್ಲ. ಕೇವಲ RTC ನಮ್ಮ ಹೆಸರಿನಲ್ಲಿ ಬರುವುದರಿಂದ 3 ಸೆಂಟ್ಸ್ ಜಾಗವನ್ನು ಕೇಳುತ್ತಿದ್ದೇವೆ ಹೊರತು ಸ್ವಾಧೀನ ಮೊದಲಿನಿಂದಲೂ ನಮಗೆ ಇಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣನ ವೆಂಡರ್ ಈ 3 ಸೆಂಟ್ಸ್ ಜಾಗವನ್ನು ನಮಗೆ ಮಾರಾಟ ಮಾಡಲು ತಕರಾರು ಮಾಡಿದ್ದಕ್ಕೆ ಕಂದಾಯ ನ್ಯಾಯಾಲಯದಲ್ಲಿ ಅವರ ವಿರುದ್ದ ವ್ಯಾಜ್ಯ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ತಂದೆಗೂ ಪ್ರತಿವಾದಿಯ ಕುಟುಂಬ ಈ 3 ಸೆಂಟ್ಸ್ ಜಾಗದಲ್ಲಿ ಮನೆ ಕಟ್ಟಿರುವುದುನ ಗೊತ್ತಿದ್ದು ಆಗ ಅದರ ಮೇಲಿನ ಮಾಲೀಕತ್ವ, ಸ್ವಾದೀನ ಬಿಟ್ಟಿದ್ದರು ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/-

ಸಿವಿಲ್ ನ್ಯಾಯಾಧೀಶರು

ಮತ್ತು ಪ್ರದನ್ಯಾದಂ., ಪೊನ್ನಂಪೇಟೆ